ಹೀಗೆ ಕೇಳಿಕೊಂಡರು: "ರಾಮಾನುಜ, ಲೋಕಗುರುವಾದ ನೀನು ಹೀಗೆ ಮಾಡುವುದು ಉಚಿತವೇ? ನೀನು ಹೀಗೆ ಮಾಡಿದರೆ ಮುಂದಿನ ಪೀಳಿಗೆ ಏನು ಮಾಡಬಹುದೆಂದು ಯೋಚಿಸಿ ನೋಡು. ಅವರು ಅಂದುಕೊಳ್ಳುತ್ತಾರೆ, 'ನಮ್ಮ ಗುರುಗಳು ಬೆಟ್ಟವನ್ನು ಹತ್ತಲಿಲ್ಲ. ಆದ್ದರಿಂದ ನಾವೂ ಹತ್ತ ಬಾರದು' ಎಂದು. ನಮ್ಮ ಪೂರ್ವಿಕರು ಭಗವಂತನನ್ನು ವಿಗ್ರಹದಲ್ಲಿ ಪೂಜಿಸುವ ಅರ್ಚಾವತಾರದ ಆರಾಧನೆಯ ಪದ್ಧತಿ ಯನ್ನು ಜಾರಿಗೆ ತಂದಿದ್ದಾರೆ. ಮುಂದಿನ ಪೀಳಿಗೆಯವರು ಬೆಟ್ಟ ಹತ್ತದಿದ್ದರೆ, ಇದಕ್ಕೆ ಅಪಚಾರವಾಗುವುದಿಲ್ಲವೇ? ಆ ಮೂಲಕ ಶ್ರೀವೈಷ್ಣವ ಧರ್ಮಕ್ಕೆ ಆಪತ್ತು ತಗಲುತ್ತದೆಯಲ್ಲವೇ?" ಈ ಮಾತುಗಳು ರಾಮಾನುಜರ ಹೃದಯವನ್ನು ಕಲಕಿದವು. ಆಗ ಅವರು ತಿರುಪತಿಯ ಬೆಟ್ಟವನ್ನು ಹತ್ತಲು ಮನಸ್ಸು ಮಾಡಿದರು.

ತಿರುಪತಿಯಲ್ಲಿ ರಾಮಾನುಜರು ಶೈಲಪೂರ್ಣರನ್ನೇ ಆಶ್ರಯಿಸಿದ್ದರು. ಒಂದು ದಿನ ರಾಮಾನುಜರು ಗುಡಿಗೆ ಹೋಗಿದ್ದರು. ಮಧ್ಯಾಹ್ನದ ವೇಳೆ ಆಗಿತ್ತು. ಶೈಲಪೂರ್ಣರೇ ಅವರ ಊಟವನ್ನು ಸಿದ್ಧಪಡಿಸುತ್ತಿದ್ದರು. ಇಳಿವಯಸ್ಸಿನಲ್ಲಿ ಅವರು ಪಡುತ್ತಿದ್ದ ಕಷ್ಟವನ್ನು ಕಂಡು ರಾಮಾನುಜರಿಗೆ ದುಃಖವಾಯಿತು. ನನಗಾಗಿ ಇವರು ಎಷ್ಟೊಂದು ಕಷ್ಟಪಡುತ್ತಿದ್ದಾರೆ ಎನ್ನಿಸಿತು. ಶೈಲಪೂರ್ಣರಿಗೆ ಹೇಳಿದರು, "ಸ್ವಾಮಿ, ಈ ಕೆಲಸಕ್ಕೆ ಬೇರೆ ಯಾರಾದರೂ ಚಿಕ್ಕವರನ್ನು ನಿಯಮಿಸಬಾರದೇ?" ಎಂದು. ಅದಕ್ಕೆ ಶೈಲಪೂರ್ಣರು ಉತ್ತರಿಸಿದರು, "ಹೌದು, ಹಾಗೆ ಮಾಡಲು ಹುಡುಕಿ ನೋಡಿದೆ. ಆದರೆ ಎಷ್ಟು ಹುಡುಕಿದರೂ ನನಗಿಂತ ಚಿಕ್ಕವನು ಸಿಕ್ಕಲೇ ಇಲ್ಲ." ಈ ಮಾತು ಕೇಳಿ ರಾಮಾನುಜರು ಚಕಿತರಾದರು. ಶೈಲಪೂರ್ಣರದು ಎಂಥ ವಿನೀತಸ್ವಭಾವ!

ಶೈಲಪೂರ್ಣರು ರಾಮಾನುಜರಿಗೆ ಶ್ರೀಮದ್‌ರಾಮಾಯಣದ ಪಾಠವನ್ನು ಆರಂಭಿಸಿದರು. ಆಗ ಹೀಗೆ ಹೇಳಿದರು: "ರಾಮಾನುಜ, ಶ್ರೀವೈಷ್ಣವರಿಗೆ 'ಕೈಂಕರ್ಯ ಮತ್ತು ಶರಣಾಗತಿ' – ಇವೆರಡೂ ಎರಡು ಕಣ್ಣುಗಳಿದ್ದಂತೆ. ಕೈಂಕರ್ಯವು ಭಗವಲ್ಲಾಭದಿಂದ ಬರುವ ಫಲ. ಕೈಂಕರ್ಯವೆಂದರೆ ನಿರಂತರ ಪರಮಾತ್ಮನ ಸೇವೆ. ಇಂಥ ಕೈಂಕರ್ಯಕ್ಕೆ ಲಕ್ಷ್ಮಣನೇ ಆದರ್ಶ. ಅವನು, **'ಅಹಂ ಸರ್ವಂ ಕರಿಷ್ಯಾಮಿ'** (ನಾನೇ ಎಲ್ಲವನ್ನೂ ಮಾಡುತ್ತೇನೆ) ಎಂದು ಹೇಳುತ್ತ, ಶ್ರೀರಾಮಚಂದ್ರನ ಸೇವೆಯನ್ನು ನಿರಂತರವೂ ಮಾಡಿದನು. ಇದೇ ಪರಮಪುರುಷಾರ್ಥ. ವಾಲ್ಮೀಕಿಯು, **'ಲಕ್ಷ್ಮಣೋ ಲಕ್ಷ್ಮಿಸಂಪನ್ನೋ'** ಎಂದು ಲಕ್ಷ್ಮಣನನ್ನು ಹೊಗಳುತ್ತಾರೆ. ಇಲ್ಲಿ 'ಲಕ್ಷ್ಮಿ' ಎಂದರೆ 'ಕೈಂಕರ್ಯ'. ಇದನ್ನೇ ಎಲ್ಲ ಆಳ್ವಾರರೂ ಆಚರಿಸಿದರು. ಆಂಡಾಳ್ ದೇವಿ ಕೂಡ ತನ್ನ ರಚನೆಗಳಲ್ಲಿ ಕೈಂಕರ್ಯಕ್ಕೇ ಒತ್ತುಕೊಡುತ್ತಾಳೆ."

ಶೈಲಪೂರ್ಣರು ತಮ್ಮ ಬೋಧನೆಯನ್ನು ಮುಂದುವರೆಸುತ್ತಾರೆ: "ಇನ್ನು ಶರಣಾಗತಿಯ ರಹಸ್ಯದ ಬಗ್ಗೆ ಕೇಳು. ರಾಮಾಯಣದ ಪ್ರತಿ ಕಾಂಡದಲ್ಲಿಯೂ ಶರಣಾಗತಿಯ ವೈಭವ ಎದ್ದುಕಾಣುತ್ತದೆ. ಬಾಲಕಾಂಡದಲ್ಲಿ ದೇವತೆಗಳು, ದಂಡಕಾರಣ್ಯದ ಋಷಿಗಳು, ಕಿಷ್ಕಿಂಧಾಕಾಂಡದಲ್ಲಿ ಸುಗ್ರೀವ, ಸುಂದರಕಾಂಡದಲ್ಲಿ ಕಾಕಾಸುರ, ಯುದ್ಧಕಾಂಡದಲ್ಲಿ ವಿಭೀಷಣ – ಇವರೆಲ್ಲರೂ ಶರಣಾಗತಿಯನ್ನು ಆಚರಿಸಿದವರೇ. ಇಡೀ ರಾಮಾಯಣವೇ ಈ ರೀತಿಯಲ್ಲಿ ಶರಣಾಗತಿಯ ಮಹತ್ವವನ್ನು ಸಾರುತ್ತದೆ ಎಂದು ಹೇಳಬಹುದು."

ರಾಮಾನುಜರು ಶೈಲಪೂರ್ಣರ ಮಾರ್ಗದರ್ಶನಲ್ಲಿ ವಾಲ್ಮೀಕಿ ರಾಮಾಯಣವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದರು. ಇದರಿಂದ ಗುರುಗಳು ಹರ್ಷಿತರಾದರು. "ರಾಮಾನುಜ, ಇಂದಿನಿಂದ ನೀನು 'ಕೋಯಿಲಣ್ಣನ್' ಎಂದು ಖ್ಯಾತನಾಗು" ಎಂದು ಹರಸಿದರು.

## ವಿರೋಧ ಪ್ರದರ್ಶನ

ರಾಮಾನುಜರು ಶ್ರೀರಂಗಕ್ಕೆ ಬಂದಮೇಲೆ ಅಲ್ಲಿನ ರಂಗನಾಥಸ್ವಾಮಿ ದೇವಾಲಯದ ಅರ್ಚಕರ ಪ್ರಾಬಲ್ಯ ಕಡಮೆಯಾಯಿತು. ಆದ್ದರಿಂದ ಅವರು ರಾಮಾನುಜರನ್ನು ಮುಗಿಸಿಬಿಡಲು ಸಂಚುಹೂಡಿದರು. ಸಂನ್ಯಾಸಿಗಳಾದ ರಾಮಾನುಜರು ಪ್ರತಿದಿನವೂ ಭಿಕ್ಷೆಗೆ ಹೋಗುತ್ತಿದ್ದರು. ಒಂದು ದಿನ ಮನೆಯೊಂದರ ಎದುರಿಗೆ ಭಿಕ್ಷೆಗೆ ನಿಂತರು. ಆ ಮನೆಯ ಯಜಮಾನಿ ಭಿಕ್ಷೆಯನ್ನು ತಂದಳು. ರಾಮಾನುಜರ ನಗುಮುಖ, ಪ್ರಭಾವಶಾಲಿ ಕಣ್ಣುಗಳನ್ನು ನೋಡುತ್ತಿದ್ದಂತೆಯೇ ಆಕೆಯ ಕೈಕಾಲುಗಳು ನಡುಗಿದವು; ಅವಳು ಅಲ್ಲಿಯೇ ಕುಸಿದಳು. ಅವರ ದಿವ್ಯ ವ್ಯಕ್ತಿತ್ವದ ಮುಂದೆ ಆಕೆಗೆ ಸುಳ್ಳು ಹೇಳಲು ಸಾಧ್ಯವಾಗಲಿಲ್ಲ. ಭಯಪಟ್ಟಿದ್ದರ ಕಾರಣವನ್ನು ರಾಮಾನುಜರು ನಯವಾಗಿ ಕೇಳಿದರು. ರಾಮಾನುಜರನ್ನು ಕೊಲ್ಲಲು ಅನ್ನದಲ್ಲಿ ವಿಷವನ್ನು ಬೆರೆಸುವಂತೆ ತನ್ನ ಗಂಡ ಹಾಗೂ ಇನ್ನು ಕೆಲವು ಜನರು ಬಲವಂತಪಡಿಸಿದರೆಂದು ಆಕೆ ತಿಳಿಸಿದಳು. ರಾಮಾನುಜರು ಆ ಅನ್ನವನ್ನು ತ್ಯಜಿಸಿದರು. ಈ ವಿಷಯವನ್ನು ತಿಳಿದ ಶಿಷ್ಯರು, ಅಂದಿನಿಂದ ತಾವೇ ಅಡುಗೆ ಮಾಡಿ ರಾಮಾನುಜರಿಗೆ ಬಡಿಸಲಾರಂಭಿಸಿದರು.

ಯಜ್ಞಮೂರ್ತಿ ಎನ್ನುವವನು ಒಬ್ಬ ದೊಡ್ಡ ಪಂಡಿತ. ವೇದಾಂತದ ವಿಷಯದ ಮೇಲೆ ವಾದ ಮಾಡಿ ಅನೇಕರನ್ನು ಪರಾಜಯಗೊಳಿಸಿದ್ದ. ಅದರಿಂದ ದುರಹಂಕಾರಿಯಾಗಿದ್ದ. ಅವನ ಕಿವಿಗೆ ರಾಮಾನುಜರ ವಿಷಯ ಬಿತ್ತು. ಅನೇಕ ಗ್ರಂಥಗಳನ್ನು ಹೊತ್ತ ಗಾಡಿಗಳು ಮತ್ತು ಶಿಷ್ಯರ ಸಮೇತ ಶ್ರೀರಂಗಕ್ಕೆ ಬಂದ. ರಾಮಾನುಜರನ್ನು ವಾದಕ್ಕೆ ಕರೆದ. ಹದಿನೆಂಟು ದಿನಗಳ ಕಾಲ ವಾದ ನಡೆಯಿತು. ಇಬ್ಬರೂ ಸರಿಸಮವಾಗಿ ವಾಕ್ಯಾರ್ಥದಲ್ಲಿ ತೊಡಗಿದರು. ಹತ್ತೊಂಬತ್ತನೆಯ ದಿನ ಯಾಮುನಾಚಾರ್ಯರ ಒಂದು ಗ್ರಂಥವನ್ನು ಆಧರಿಸಿ, ರಾಮಾನುಜರು ವಾದ ಮಾಡಿದರು. ಗೆಲ್ಲುವೆನೆಂದುಕೊಂಡಿದ್ದ ಯಜ್ಞಮೂರ್ತಿ ವಾದದ ಕೊನೆಯ ದಿನ ಸೋತುಬಿಟ್ಟ; ರಾಮಾನುಜರ ಶಿಷ್ಯನಾದ. ಅವನಿಗೆ ಆಚಾರ್ಯರು, 'ದೇವರಾಜ ಮುನಿ' ಎಂದು ಹೆಸರು ಕೊಟ್ಟರು.

*(ಮುಂದುವರೆಯುವುದು)*